ವಿವರಗಳು	2003–04		2004–05	
	ಸಹಾಯ ಧನ	ಫಲಾನು ಭವಿಗಳು	ಸಹಾಯ ಧನ	ಫಲಾನು ಭವಿಗಳು
1. ಪ್ರದೇಶ ವಿಸ್ತರಣೆ	5.80	82	0.69	7
2. ತರಬೇತಿ	0.40	2	0.40	2
3. ನೆರಳುಪರದೆ/ ಹಸಿರು ಮನೆ	---	---	2.08	5
4. ಪ್ರಚಾರ	---	---	0.97	1
ಒಟ್ಟು	**6.20**	**84**	**4.14**	**15**

4698 (5537) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ) :– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಡಿಕೇರಿ ವಿಧಾನಸಭಾ ಕ್ಷೇತ್ರದಲ್ಲಿ ಯಶಸ್ವಿನಿ ಯೋಜನೆಯಲ್ಲಿ ಸದಸ್ಯತ್ವ ಪಡೆದಿರುವವರೆಷ್ಟು (ವಿವರ ನೀಡುವುದು);

ಆ) ಈ ಯೋಜನೆಯಡಿಯಲ್ಲಿ ಈವರೆಗೆ ಹಣ ಪಾವತಿಯಾಗಿರುವವರೆಷ್ಟು; (ವಿವರ ನೀಡುವುದು);

ಇ) ಯಶಸ್ವಿನಿ ಯೋಜನೆಯಡಿ ಎಷ್ಟು ಪ್ರಕರಣಗಳನ್ನು ತಿರಸ್ಕರಿಸಲಾಗಿದೆ? ತಿರಸ್ಕರಿಸಲು ಕಾರಣವೇನು? (ವಿವರ ಒದಗಿಸುವುದು)?

ಶ್ರೀ ಆರ್.ವಿ. ದೇಶ್‌ಪಾಂಡೆ (ಸಹಕಾರ ಸಚಿವರು):

ಅ) ಮಡಿಕೇರಿ ವಿಧಾನಸಭಾ ಕ್ಷೇತ್ರದಲ್ಲಿ ಯಶಸ್ವಿನಿ ಯೋಜನೆಯಲ್ಲಿ ಸದಸ್ಯತ್ವ ಪಡೆದಿರುವವರ ಸಂಖ್ಯೆ ಸದ್ಯಕ್ಕೆ ಲಭ್ಯವಿಲ್ಲ. ಆದರೆ, ಕೊಡಗು ಜಿಲ್ಲೆಯಲ್ಲಿ ಯಶಸ್ವಿನಿ ಯೋಜನೆಯ ಸದಸ್ಯತ್ವ ಪಡೆದಿರುವವರ ವಿವರ ವರ್ಷವಾರು ಈ ಕೆಳಗಿನಂತೆ ಇರುತ್ತದೆ.

ವರ್ಷ	ಸಂಖ್ಯೆ
2003–04	50,550
2004–05	54,422
2005–06 (ದಿನಾಂಕ 08–07–2005 ಕ್ಕೆ ಇರುವಂತೆ)	30,681
ಒಟ್ಟು	**1,35,653**

ಆ) ಈ ಯೋಜನೆಯಡಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ 24,122 ಫಲಾನುಭವಿಗಳ ಪರವಾಗಿ ನೆಟ್‌ವರ್ಕ ಆಸ್ಪತ್ರೆಗಳಿಗೆ 28.56 ಕೋಟಿ ಹಣ ಪಾವತಿಯಾಗಿದೆ. ಈ ಪೈಕಿ ಕೊಡಗು ಜಿಲ್ಲೆಯಲ್ಲಿ 312 ಫಲಾನುಭವಿಗಳ ಪರವಾಗಿ ನೆಟ್‌ವರ್ಕ ಆಸ್ಪತ್ರೆಗಳಿಗೆ ರೂ. 42.56 ಲಕ್ಷ ಹಣ ಪಾವತಿಯಾಗಿದೆ. ವರ್ಷವಾರು ವಿವರ ಈ ಕೆಳಗಿನಂತಿರುತ್ತದೆ.

ವರ್ಷ	ರಾಜ್ಯ	ಕೊಡಗು
2003–04	9039	124
2004–05	15083	187
ಒಟ್ಟು	**24122**	**311**

ಇ) ಯಶಸ್ವಿನಿ ಯೋಜನೆಯಡಿ ಯಾವುದೇ ಪ್ರಕರಣವನ್ನು ನಿಷ್ಕಾರಣವಾಗಿ ತಿರಸ್ಕರಿಸಿರುವುದಿಲ್ಲ ಅಪೂರ್ಣ ಪ್ರಸ್ತಾವಗಳನ್ನು ಮಾತ್ರ ಹಿಂದೆ ಕಳಿಸಲಾಗಿದೆ.

4699 (5538) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ) :– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಶಸ್ವಿನಿ ಯೋಜನೆಯಡಿ ಯಾವ ಯಾವ ಚಿಕಿತ್ಸೆಗಳಿಗೆ ಹಣ ನೀಡಲಾಗುವುದು;

ಆ) ಯಶಸ್ವಿನಿ ಯೋಜನೆಯಡಿ ಕುಟುಂಬ ಅಂದರೆ ಯಾರ್ಯಾರು ಒಳಪಡುತ್ತಾರೆ; (ವಿವರ ಒದಗಿಸುವುದು)

ಇ) ಒಬ್ಬ ಸದಸ್ಯನು ಯಶಸ್ವಿನಿ ಯೋಜನೆಯ ಸದಸ್ಯತ್ವ ಪಡೆದುಕೊಂಡರೆ ಯಾರ್ಯಾರಿಗೆ ಸಹಾಯ ದೊರೆಯುತ್ತದೆ; (ವಿವರ ಒದಗಿಸುವುದು);

ಈ) ಯಶಸ್ವಿನಿ ಯೋಜನೆಯಿಂದ ಕೊಡಗು ಜಿಲ್ಲೆಯಲ್ಲಿ ಪ್ರಯೋಜನ ಪಡೆದಿರುವವರೆಷ್ಟು; (ವಿವರಗಳನ್ನು ಒದಗಿಸುವುದು) ತಿರಸ್ಕರಿಸಲಾದ ಅರ್ಜಿಗಳೆಷ್ಟು? (ವಿವರಗಳನ್ನು ಒದಗಿಸುವುದು)

ಶ್ರೀ ಆರ್.ವಿ. ದೇಶ್‌ಪಾಂಡೆ (ಸಹಕಾರ ಸಚಿವರು) :

ಅ) ಯಶಸ್ವಿನಿ ಯೋಜನೆಯಡಿ ಗುರುತಿಸಿದ 1,600 ಶಸ್ತ್ರಚಿಕಿತ್ಸೆಗಳಿಗೆ ಮಾತ್ರ ಹಣ ನೀಡಲಾಗುವುದು. ವಿವರಗಳು ಯಶಸ್ವಿನಿ ವೆಬ್‌ಸೈಟ್‌ನಲ್ಲಿ ಲಭ್ಯವಿದೆ.